


# ಕನ್ನಡ್ ಪದಗೊಳ್

ಸಣ್ಣಾಗಿದ್ದಾಗ್ ಆಕಂತಿದ್ದೆ ತುಂಡ್ ಆಗಿರ್ತಿದ್ ಚಡ್ಡಿ
ರಾತ್ರಿ ಓದಕ್ ಇರ್ತಾಯಿತ್ತು ತುಕ್ಕಿನ್ ಚುಮ್ನಿ ಬುಡ್ಡಿ
ಓದಾ ನೆಪದಲ್ ಆಡಾವಾಗ ಮುರ್ದಿತ್ ದೋಸ್ತನ್ ಹಡ್ಡಿ
ಅವ್ವ ಕ್ವಾಪಕ್ ವಡಿತಾಯಿದ್ಲು ತಕ್ಕಂಡ್ ಪರ್ಕೆಕಡ್ಡಿ

ದೊಡ್ಡಾಗ್ತಿದ್ದಂಗ್ ಮತ್ತೋರ್ಗಿತ್ತು ಕನ್ನಡ್ ಪದಗೊಳ್ ದ್ಯಾಸ
ಓದ್ತಾ ಓದ್ತಾ ಬೆಳ್ದಾಗಿತ್ತು ಇಂಗ್ಲಿಸ್ನ ಸಾವಾಸ
ಕೆಲ್ಸ ಕೆಲ್ಸ ಅಂತ ಏಳ್ಕಂಡ್ ಓಯ್ತಾ ಇತ್ತು ಮಾಸ
ಕನ್ನಡ್ ನೆನ್ಸಕ್ ಮತ್ತೆ ಬಂದಿದ್ ಮಹಾಭಾರ್ತದ್ ಯಾಸ

ಯೆಂಡ ತಂದ್ರು, ಯೆಂಡ್ತಿ ಬಂದ್ರು ಬೆಳಿಲೇ ಇಲ್ಲ ಗ್ಯಾನ
ಯಂಡ ಕುಡ್ಕಂಡ್ ಬಂದಿದ್ ಅಷ್ಟಕ್ ಹರಾಜ್ಗಿಟ್ಲು ಮಾನ
ಯಂಡಕ್ ಯೆಂಡ್ತೀಗ್ ಆಗಾಕಿಲ್ಲ ಮಾಡ್ಕ ಸಮಾಧಾನ
ಯಂಡಕ್ ಬಿಟ್ಟೆ ಯೆಂಡ್ತೀಗ್ ಇಟ್ಟೆ ತಲ್ಯಾಗಿದ್ದಿದ್ ದ್ಯಾನ

ಕನ್ನಡ್ಕಿಂತ ಎಚ್ಚೇನಿಲ್ಲ ಹನುಮನ್ ಮ್ಯಾಲ್ ಪರ್ಮಾಣ
ಕನ್ನಡ್ ಪದಗೊಳ್ ಬರ್ಯಾಕಂದ್ರೆ ಮುಂದಿರ್ತವ್ನೆ ಜಾಣ
ತಪ್ಪಾಯ್ತಂದ್ರೆ ಚುಚ್ದಂಗ್ ಆಗ್ತೈತ್ ರಾಮ ಬಿಟ್ಟಿದ್ ಬಾಣ
ಕನ್ನಡ್ ಪದಗೊಳ್ ಕಂಡ್ರೆ ಸಾಕು ಮಿಡಿತೈತ್ ಗೌಡನ್ ಪ್ರಾಣ

ಯಸಸ್ ತಗಂಡು ಮಾಡಾದೇನೈತ್ ಇಲ್ದೇ ಇದ್ದಾಗ್ ನೆಮ್ದಿ
ಮನ್ಸತ್ವಾನೆ ಸತ್ತೋಗೈತೆ ಎಲ್ಲೀಗ್ ನೀ ಅದ ಚೆಮ್ದಿ
ಸಾದ್ನೇ ಗೀದ್ನೇ ಮಾಡ್ಬೇಕ್ ಅನ್ಕಂಡ್ ಕಾಣ್ತಾ ಇರ್ತಾನ್ ಕನ್ಸ
ಜೇವ್ನ ಅನ್ನೋದ್ ಜೇವ್ಸಾಕಂತ ಮರ್ತ್ ಬುಟ್ಟವ್ನೆ ಮನ್ಸ

**● ಅಜ್ಞಾನಿ**

ಕಲೆ: ವಾಗೀಶ ಹೆಗಡೆ